**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ.24.01.2025**

## ಪಾಟಿ ಸವಾಲುಃ ವಾದಿ ಪರ ಶ್ರೀಮತಿ. ಟಿ ಕೆ ಎಸ್ ಎನ್ ಆರ್ ಎಸ್ ವಕೀಲರಿಂದಃ

1. ಸರ್ವೆ ನಂ.37 ನನ್ನ ತಾತ ವೆಂಕಟರಾಯಪ್ಪ ರವರ ಆಸ್ತಿ. ಸರ್ವೆ ನಂ.37 ಮೂಲತಃ ನನ್ನ ತಾತನಿಗೆ ಬಂದಿತ್ತು. ಅದರ ಒಟ್ಟು ವಿಸ್ತೀರ್ಣ 1 ಎಕರೆ 2 ಗುಂಟೆ. ನನ್ನ ತಾತನ ಮೊದಲನೇ ಹೆಂಡತಿಗೆ 2 ಗಂಡು ಮಕ್ಕಳು ಅವರುಗಳೆಂದರೆ ವಿ.ಮುನಿಯಪ್ಪ ಮತ್ತು ಚಿಕ್ಕಮುನಿಯಪ್ಪ ಮತ್ತು ಎರಡನೆಯ ಹೆಂಡತಿ ಅಕ್ಕಯ್ಯಯ್ಯಮ್ಮನಿಗೆ 3 ಗಂಡು ಮಕ್ಕಳು ಅವರುಗಳೆಂದರೆ ಸುಬ್ಬಣ್ಣ, ದೊಡ್ಡಪ್ಪಯ್ಯ, ವಿಜಯಕುಮಾರ್ ಮತ್ತು 1 ಹೆಣ್ಣು ಮಗಳು ಹೇಮಾವತಿ. ನನ್ನ ತಾತನ 2 ನೇ ಹೆಂಡತಿಗೆ ಹೇಮಾವತಿ ಎಂಬ ಹೆಣ್ಣು ಮಗಳು ಇರಲಿಲ್ಲ ಎಂದರೆ ಸರಿಯಲ್ಲ. ದಿಃ08.09.1965 ರಲ್ಲಿ ನನ್ನ ತಾತನ ಜೀವಿತ ಕಾಲದಲ್ಲಿ ವಿಭಾಗ ಮಾಡಿಕೊಂಡಿದ್ದೆವು ಎಂದರೆ ಸರಿ. ಸದರಿ ವಿಭಾಗ ಪತ್ರದಂತೆ ಎ ಷೆಡ್ಯೂಲ್ ಆಸ್ತಿಯು ವೆಂಕಟರಾಯಪ್ಪ ಮತ್ತು ಅವರ ಮಕ್ಕಳಿಗೆ ಬಂದಿದೆ ಎಂದರೆ ಸರಿ. ನನ್ನ ತಾತನಿಗೆ ಯಾವ ಯಾವ ಆಸ್ತಿಗಳು ಬಂದಿದೆ ಎಂದು ನನಗೆ ಗೊತ್ತಿರುವುದಿಲ್ಲ.

2. ನಿಡಿ-14 ರಲ್ಲಿ ನನ್ನ ತಾತನಿಗೆ ಸರ್ವೆ ನಂ.37 ರಲ್ಲಿ ಯವುದೇ ಭಾಗಾಂಶ ಬಂದಿರಲಿಲ್ಲ ಎಂದರೆ ಸರಿಯಲ್ಲ. ನಿಡಿ-14 ರಲ್ಲಿ ಚಿಕ್ಕಮುನಿಯಪ್ಪ ಮತ್ತು ಮುನಿಯಪ್ಪನಿಗೆ ತಲಾ 21 ಗುಂಟೆ ಎಂದು ನಮೂದು ಇದೆ ಎಂದರೆ ಸರಿ. ಚಿಕ್ಕಮುನಿಯಪ್ಪ ರವರ ಜೀವಿತ ಕಾಲದಲ್ಲಿ ಸರ್ವೆ ನಂ.37 ರಲ್ಲಿ 21 ಗುಂಟೆಗೆ ಖಾತೆ ಪಹಣಿ ಆಗಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1973 ರ ಕ್ರಯ ಪತ್ರದಂತೆ ವಾದಿಯ ತಂದೆಯ ಹೆಸರಿಗೆ ಕ್ರಯ ಪತ್ರಗಳು ಬರುತ್ತಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮುನಿಶಾಮಪ್ಪ ರವರ ಹೆಸರಿಗೆ ಪಹಣಿಯಲ್ಲಿ 21 ಗುಂಟೆಗೆ ಖಾತೆ ಇದೆ ಎಂದರೆ ಸರಿ. ನಿಪಿ-1 ರಂತೆ 1983 ರಲ್ಲಿ ಚಿಕ್ಕಮುನಿಯಪ್ಪ ಪತ್ರ ಬರೆದುಕೊಟ್ಟಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಡಿ-14 ರಲ್ಲಿ ನಮೂದಿಸಿರುವ ಚೆಕ್ಕುಬಂದಿಯಂತೆ ನಿಪಿ-1 ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಡಿ-14 ರಲ್ಲಿರುವ ಚೆಕ್ಕುಬಂದಿ ಮತ್ತು ನಿಪಿ-1 ರಲ್ಲಿರುವ ಚೆಕ್ಕುಬಂದಿ ಒಂದೇ ಎಂದರೆ ಸರಿಯಲ್ಲ.

3. ನಿಪಿ-1 ರಂತೆ ವಾದಿಗಳು ಸ್ವಾದೀನದಲ್ಲಿ ಇದ್ದಾರೆ ಎಂದರೆ ಸಾಕ್ಷಿ 14 ಗುಂಟೆಯಲ್ಲಿ ಮಾತ್ರ ಸ್ವಾದೀನದಲ್ಲಿದ್ದಾರೆ ಎಂದು ನುಡಿಯುತ್ತಾರೆ. 21 ಗುಂಟೆ ಎಂದು ಇರುವ ಚೆಕ್ಕುಬಂದಿಯಂತೆ 21 ಗುಂಟೆಯಲ್ಲಿ ಸ್ವಾದೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ವಾದಿಯ ಕ್ರಯ ಪತ್ರದಲ್ಲಿರುವ ಚೆಕ್ಕುಬಂದಿ ತಪ್ಪಾಗಿದೆ ಎಂದು ದಾವೆಯನ್ನು 2001-02 ನೇ ಸಾಲಿನಲ್ಲಿ ತಹಶೀಲ್ದಾರ್ ನ್ಯಾಯಾಲಯದಲ್ಲಿ ಹೂಡಿರುತ್ತೇನೆ. ಆ ರೀತಿ ಯಾವುದೇ ದಾವೆ ಸಲ್ಲಿಸದೇ ಇದ್ದರೂ, ರಾಜಕೀಯ ಪ್ರಭಾವದಿಂದ ವಾದಿಯ ಆಸ್ತಿಯನ್ನು ಕಬಳಿಸಬೇಕೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1979 ರಿಂದ 2000 ನೇ ಸಾಲಿನವರೆಗೂ ದಾವಾ ಅಸ್ತಿಗೆ ವಾದಿಯ ಕುಟುಂಬದವರ ಹೆಸರು ಬರುತ್ತಿತ್ತು ಎಂದರೆ ಸಾಕ್ಷಿ ಅವರ ಕ್ರಯ ಪತ್ರವನ್ನು ನಾನು ನೋಪಡಿರುವುದಿಲ್ಲ,

ನಾವು ದಾವಾ ಆಸ್ತಿಯಲ್ಲಿ ಸ್ವಾದೀನದಲ್ಲಿದ್ದೇವೆ ಎಂದು ನುಡಿಯುತ್ತಾರೆ. ವಾದಿಗಳ ಗಮನಕ್ಕೆ ಬರದೇ ಕಾನೂನಿನ ಬಾಹಿರವಾಗಿ ಸರ್ವೆ ನಂ.37 ನ್ನು ಪೋಡಿ ಮಾಡಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-4 ರಂತೆ ನನ್ನ ಹೆಸರಿಗೆ ಇದ್ದ ಖಾತೆಯನ್ನು ರದ್ದು ಪಡಿಸಿ ವಾದಿಗಳ ಹೆಸರಿಗೆ ಖಾತೆ ಮಾಡುವಂತೆ ಆದೇಶ ಮಾಡಿದ್ದಾರೆ ಎಂದರೆ ಸಾಕ್ಷಿ ಅದು ತಪ್ಪು ಎಂದು ನುಡಿಯುತ್ತಾರೆ.

4. ನಿಡಿ-14 ರಂತೆ ನನ್ನ ತಾತನಿಗೆ ಸರ್ವೆ ನಂ.37 ರಲ್ಲಿ ಯಾವುದೇ ಆಸ್ತಿ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಯು ಕೇವಲ ಚಿಕ್ಕಮುನಿಯಪ್ಪ ಮತ್ತು ಮುನಿಯಪ್ಪನಿಗೆ ಮಾತ್ರ ಹಿಸ್ಸೆ ಇದ್ದು, ವೆಂಕಟರಾಮಪ್ಪ ರವರಿಗೆ ಯಾವುದೇ ಹಿಸ್ಸೆ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾತ ವೆಂಕಟರಾಯಪ್ಪನಿಗೆ ಬೇರೆ ಆಸ್ತಿಗಳಲ್ಲಿ ಭಾಗ ಬಂದಿತ್ತು ಎಂದರೆ ಸರಿಯಲ್ಲ. ಆ ರೀತಿ ನನ್ನ ತಾತನಿಗೆ ಜಾಸ್ತಿ ಹೋಗಿದ್ದು ಮತ್ತು ಚಿಕ್ಕಮುನಿಯಪ್ಪ ಮತ್ತು ಮುನಿಯಪ್ಪನಿಗೆ ಕಡಿಮೆ ಆಸ್ತಿ ಹೋಗಿದೆ ಎಂದರೆ ಸಾಕ್ಷಿ ನನ್ನ ತಂದೆಗೆ ಹೆಚ್ಚಿನ ಆಸ್ತಿ ಕೊಡಬೇಕು ಎಂದು ಹೇಳಿದಂತೆ ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. 1965 ನಿಡಿ-14 ರ ವಿಭಾಗ ಪತ್ರದಂತೆ ಅವರವರ ಹಿಸ್ಸೆಗೆ ಅವರೇ ಸ್ವಾದೀನದಲ್ಲಿದ್ದಾರೆ ಎಂದರೆ ಸರಿ. ಅದರಂತೆ ಅವರುಗಳೇ ಕಂದಾಯ ಪಾವತಿ ಮಾಡುತ್ತಿದ್ದಾರೆ ಎಂದರೆ ಸರಿ. ಇಂದಿನವರೆಗೂ ವಾದಿಗಳು ತಮ್ಮ ಸ್ವತ್ತಿಗೆ ಕಂದಾಯ ಪಾವತಿ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

5. ನಮ್ಮ ಮತ್ತು ವಾದಿಗಳ ನಡುವೆ 2008 ರಲ್ಲಿ ಗಲಾಟೆಯಾಗಿತ್ತು ಎಂದರೆ ಸರಿಯಲ್ಲ. ವಾದಿಗಳ ಸ್ವತ್ತಿಗೆ ನಾವು ತೊಂದರೆ ಕೊಟ್ಟಿದ್ದೆವು ಎಂದರೆ ಸರಿಯಲ್ಲ. ವಾದಿಗಳು ನಮ್ಮ ವಿರುದ್ದ ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು ಎಂದರೆ ಸರಿಯಲ್ಲ. ನಿಪಿ-4 ರ ಆದೇಶವನ್ನು ನಾವು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿದ್ದೆವು. ನಾವು ಮೇಲ್ಮನವಿ ಸಲ್ಲಿಸುವುದಕ್ಕಿಂತ ಮೊದಲು ನಮ್ಮ ಮತ್ತು ವಾದಿಗಳ ನಡುವೆ ಗಲಾಟೆಯಾಗಿತ್ತು ಎಂದರೆ ಸರಿಯಲ್ಲ. ನಾವು ವಾದಿಗಳ ಸ್ವತ್ತಿನಲ್ಲಿ ಕ್ರಂಚ್ ಹೊಡೆಯಲು ಹೋಗಿದ್ದೆವು ಎಂದರೆ ಸರಿಯಲ್ಲ, ಆ ಕಾರಣದಿಂದ ನಮ್ಮ ಮೇಲೆ ಈ ದಾವೆ ಸಲಿಲಸಿದ್ದಾರೆ ಎಂದರೆ ಸರಿಯಲ್ಲ. ಕಂದಾಯ ಅಧಿಕಾರಿಗಳ ಜೊತೆ ಶಾಮೀಲಾಗಿ ಸರ್ವೆ ನಂ.37 ಕ್ಕೆ ಹಿಸ್ಸಾ ಪೋಡಿ ಮಾಡಿಸಿದ್ದೇವೆ ಎಂದರೆ ಸರಿಯಲ್ಲ. ಸರ್ವೆ ನಂ.37 ರಲ್ಲಿ ತಲಾ 14 ಗುಂಟೆ ಜಮೀನು ಬಂದ ಬಗ್ಗೆ ವಿಭಾಗ ಪತ್ರವನ್ನು ಹಾಜರು ಪಡಿಸಿರುತ್ತೇನೆ. ಆ ರೀತಿ ನನ್ನ ತಂದೆಗೆ 14 ಗುಂಟೆ ಜಮೀನು ಬಂದಿದೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತಹ ಯಾವುದೇ ವಿಭಾಗ ಪತ್ರ ಆಗಿರುವುದಿಲ್ಲ ಎಂದರೆ ಸರಿಯಲ್ಲ.

6. ನನ್ನ ಮುಖ್ಯ ವಿಚಾರಣೆಯ 3 ನೇ ಖಂಡಿಕೆಯಲ್ಲಿ ಹೇಳಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ 4 ನೇ ಖಂಡಿಕೆಯಲ್ಲಿ ತಿಳಿಸಿದಂತೆ ಮುನಿಯಪ್ಪನಿಗೆ 14 ಗುಂಟೆ ಬಂದಿದೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಆ ರೀತಿ 14 ಗುಂಟೆಗಳು ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. ಹನುಮಪ್ಪ ಮತ್ತು ನಾರಾಯಣಸ್ವಾಮಿ ಸ್ವಾದೀನದಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಗಳು ದಾವಾ ಆಸ್ತಿಯಲ್ಲಿ ಸ್ವಾದೀನದಲ್ಲಿದ್ದು, ಅವರ ಆಸ್ತಿಯನ್ನು ಕಬಳಿಸಬೇಕೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಂದಾಯ

ಅಧಿಕಾರಿಗಳ ಜೊತೆ ಶಾಮೀಲಾಗಿ ನಿಡಿ-3, 17 ಮತ್ತು 19 ರಿಂದ 21 ನ್ನು ಸೃಷ್ಟಿಮಾಡಿದ್ದೇವೆ ಎಂದರೆ ಸರಿಯಲ್ಲ. ನಿಡಿ-16 ರಿಂದ 21 ರಲ್ಲಿ ವಾದಿಗಳು ಮತ್ತು ಅವರ ಕುಟುಂಬದವರು ಯಾವುದೇ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಕಂದಾಯ ಅಧಿಕಾರಿಗಳ ಜೊತೆ ಶಾಮೀಲಾಗಿ ನಿಡಿ-16 ರಿಂದ 26 ನ್ನು ಸೃಷ್ಟಿಮಾಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಅಸ್ತಿಯಲ್ಲಿ ನಾವು ಯಾವುದೇ ಸ್ವಾದೀನದಲ್ಲಿದೇ ಇದ್ದರೂ, ಕಂದಾಯ ಅಧಿಕಾರಿಗಳ ಜೊತೆ ಶಾಮೀಲಾಗಿ ವಾದಿಗಳಿಗೆ ತೊಂದರೆ ಕೊಡುತಿದ್ದೇನೆ ಎಂದರೆ ಸರಿಯಲ್ಲ. ನಿಪಿ-4 ರಂತೆ ನೋಟಿಸ್ ನೀಡಿ ಆದೇಶ ಮಾಡಿದ್ದರು ಎಂದರೆ ಸರಿಯಲ್ಲ. ಜಿಲ್ಲಾಧಿಕಾರಿಗಳು ನಿಪಿ-4 ರ ಆದೇಶವನ್ನು ರದ್ದು ಪಡಿಸಿ ಸಿವಿಲ್ ನ್ಯಾಯಾಲಯದ ಆದೇಶಕ್ಕೆ ಒಳಪಡುತ್ತದೆ ಎಂದು ಆದೇಶ ಮಾಡಿದ್ದಾರೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

**(ಮರು ವಿಚಾರಣೆಃ ಇಲ್ಲ.)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ.**